ಅಧ್ಯಕ್ಷರು :— ವೈದ್ಯನಾಥ ಪಾಟೀಲರೆ, ನಿಮ್ಮನ್ನು ನಂತರ ಕರೆಯುತ್ತೇನೆ ಈಗ ವಿಶ್ವೇಶ್ವರ ಹೆಗ್ಡೆಯವರು ವಿಷಯ ಪ್ರಸ್ತಾಪ ಮಾಡುವುದು.

(ಈ) ಸಿರಸಿಯಲ್ಲಿ ಕಳ್ಳತನ, ದರೋಡೆ ಪ್ರಕರಣಗಳನ್ನು ತಡೆಗಟ್ಟುವ ಬಗ್ಗೆ.

ಶ್ರೀ ಕೆ. ವಿಶ್ವೇಶ್ವರ ಹೆಗ್ಗಡೆ (ಅಂಕೋಲ) :— ಮಾನ್ಯ ಅಧ್ಯಕ್ಷರೆ, ನಾನು ಈ ಶೂನ್ಯವೇಳೆಯಲ್ಲಿ ಮಾನ್ಯ ಗೃಹ ಸಚಿವರಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಬಯಸುತ್ತಿದ್ದೇನೆ. ನಾನು ಪೂರ್ಣ ಜಿಲ್ಲೆಯ ಬಗ್ಗೆ ಹೇಳಿದರೆ ವಿಸ್ತಾರವಾಗಬಹುದು ವಿಶೇಷವಾಗಿ ನನ್ನ ಕ್ಷೇತ್ರದ ಸಿರಸಿ ಹಾಗೂ ಯಲ್ಲಾಪುರಗಳಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕಳ್ಳತನ, ದರೋಡೆ, ಹಲ್ಲೆಗಳು, ಕೊಲೆಗಳು ಈ ರೀತಿಯ ಪ್ರಕರಣಗಳು ಹೆಚ್ಚುತ್ತಿವೆ. ಇಲ್ಲಿ ಸ್ಥಳೀಯವಾಗಿರುವ ಅಧಿಕಾರಿಗಳು, ಅವರು ಪಿಎಸ್‌ಐ ಮಟ್ಟದ, ಸಿಪಿಐ ಮಟ್ಟದ ಅಥವಾ ಡಿವೈಎಸ್‌ಪಿ ಇರಬಹುದು, ಇದಕ್ಕೆ ಅವರು ನೇರವಾಗಿ ಕಾರಣರಾಗಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ. ಪ್ರತಿ ಹಂತದಲ್ಲೂ ಎಸ್‌ಪಿಯವರು ಬಂದು ಪ್ರಕರಣವನ್ನು ತನಿಖೆ ಮಾಡುವಂತಹ ಒಂದು ದುಸ್ಥಿಗೆ ತಮ್ಮ ಇಲಾಖೆ ತಲುಪಿದೆ. ಅನೇಕ ವರ್ಷದಿಂದ ಸಿದ್ದಾಪುರದಲ್ಲಿ ಒಂದು ಕ್ಲಬ್ ನಡೆಯುತ್ತಿತ್ತು. ಎಸ್‌ಪಿಯವರು ಧಾಳಿ ಮಾಡಿದರು, ಬೇರೆ ಡಿವೈಎಸ್‌ಪಿ, ಪಿಎಸ್‌ಐಗಳು ಇರಲಿಲ್ಲವೇ? ಆದರು ಅದು ಏನಾಯಿತೊ ಗೊತ್ತಲ್ಲ, ಸಿರಸಿಯಲ್ಲಿ ವಾಹನಗಳ ಕಳ್ಳಸಾಗಾಣಿಕೆ ದೊಡ್ಡ ಪ್ರಮಾಣದಲ್ಲಿ ನಡೆಯಿತು, ಅದನ್ನು ಹಿಡಿದರು, ಮುಂದೆ ಏನಾಯಿತೋ ಗೊತ್ತಿಲ್ಲ. ಅಂದರೆ, ಈ ರೀತಿಯ ತನಿಖೆಗಳನ್ನು ಮೇಲಾಧಿಕಾರಿಗಳೇ ಬಂದು ಮಾಡುವಂತಹ ಒಂದು ಸ್ಥಿತಿಗೆ ತಲುಪಿದೆ. ಸ್ಥಳೀಯವಾಗಿರುವ ಡಿವೈಎಸ್‌ಪಿ ಮಟ್ಟದವರೆಗಿನ ಎಲ್ಲಾ ಅಧಿಕಾರಿಗಳು ನೇರವಾಗಿ ಅಥವಾ ಪರೋಕ್ಷವಾಗಿ ಇದರಲ್ಲಿ ಒಂದಾಗಿದ್ದಾರೆ, ಶಾಮೀಲಾಗಿದ್ದಾರೆ. ನಾನು ಇನ್ನು ಅನೇಕ ಸಂಗತಿಗಳನ್ನು ಹೇಳಬಹುದು, ಸಿರಸಿಯಲ್ಲಿ ಒಂದು ರೋಡ್ ರೋಲರ್ ಕಳೆದುಹೋಯಿತು, ಅದು ಸಿಕ್ಕಿತು ಎಂದು ಎರಡೆದಿವಸಗಳಲ್ಲಿ ಪತ್ರಿಕೆಯಲ್ಲಿ ಬಂತು. ಹೀಗೆ ಅಲ್ಲಿ ಬೇರೆ ಕಾನೂನುಬಾಹಿರ ಚಟುವಟಿಕೆ ನಡೆದಿರುವುದು, ಕೊಲೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ಕೊಲೆ ಮಾಡಿರುವವರು ಯಾರೆಂದು ಊರಿನವರೆಲ್ಲಾ ಹೇಳುತ್ತಾರೆ ಆದರೆ ಪೋಲಿಸ್ ಇಲಾಖೆಯಿಂದ ಅವರನ್ನು ಹಿಡಿಯುವುದಕ್ಕಾಗುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ ಇವತ್ತು ಮುಗ್ದರು ಭಯಭೀತರಾಗಿದ್ದಾರೆ, ಇವತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗುತ್ತಿದೆ ಎನ್ನುವ ಭಯವಿದೆ. ಕಳೆದ ಹದಿನೈದು ದಿವಸಗಳ ಹಿಂದೆ ಒಂದು ಘಟನೆ ನಡೆಯಿತು ಅದನ್ನು ವಿಶೇಷವಾಗಿ ಇಲ್ಲಿ ಪ್ರಸ್ತಾಪಿಸುವುದಕ್ಕೆ ಬಯಸುತ್ತಿದ್ದೇನೆ. ಕಳೆದ ಹದಿನೈದು ದಿವಸಗಳ ಹಿಂದೆ ಅಡಿಕೆ ಕಳವಾಯಿತು, ಅದಕ್ಕೆ ಒಳ್ಳೆಯ ದರ ಬಂದಿದೆ ಎಂದು ಅಡಿಕೆ ಕಳವು ಹೆಚ್ಚಾಗುತ್ತಿದೆ. ಕಳವಾದಾಗ, ನಾನೇ ಸ್ವತಃ ಮೇಲಾಧಿಕಾರಿಗಳಿಗೆ, ಈ ರೀತಿ ಕಳವಾಗಿದೆ, ಯೋಗ್ಯ ತನಿಖೆ ಮಾಡಿ, ಅಪರಾಧಿಗಳನ್ನು ಹಿಡಿದಿದ್ದೀರಿ, ಅವರನ್ನು ಬಿಡಬೇಡಿ, ಅವರು ಏನೇನು ಮಾಡುತ್ತಿದ್ದರೆ, ಅದಕ್ಕೆ ಚೈನ್ ಲಿಂಕ್ ಏನಿದೆ ಅದನ್ನು ಹಿಡಿಯಿರಿ ಎಂದು ಹೇಳಿದೆ. ಕೆಲವರನ್ನು ಹಿಡಿದು

ಇವರು ಹಾಟಾಚಾರಕ್ಕೆ ಕೇಸ್ ದಾಖಲು ಮಾಡಿ ಕಳುಹಿಸಿದರು. ಈಗ ಅದರ ಪರಿಣಾಮವೇನಾಗಿದೆ ಎಂದರೆ, ಅವರನ್ನು ಹಗುರವಾಗಿ ಬಿಟ್ಟ ಕಾರಣ, ನನ್ನ ಕ್ಷೇತ್ರದ ಸಿರಸಿಯಲ್ಲಿ ಕಡಬಾಳ್‌ನಲ್ಲಿ ಮೊನ್ನೆ ಭತ್ತದ ಗೊಣಬೆಗೆ ಬೆಂಕಿಯನ್ನು ಹಾಕಿದ್ದಾರೆ, ಎರಡು ಮೋಟರ್ ಸೈಕಲ್‌ನ್ನು ಸುಟ್ಟಿದ್ದಾರೆ. ಮೋಟರ್ ಸೈಕಲ್ ಸುಟ್ಟು, ಭತ್ತದ ಗೊಣಬೆಗೆ ಬೆಂಕಿ ಹಾಕಿದ್ದರಿಂದ ಹಳ್ಳಿಯಲ್ಲಿರುವ ರೈತರು ಇಷ್ಟು ಕಷ್ಟವನ್ನು ಅನುಭವಿಸುವಂತಹ ಸ್ಥಿತಿ ಉಂಟಾಗಿದೆ. ಸ್ಥಳೀಯ ಅಧಿಕಾರಿಗಳು ಅವರೊಡನೆ ಶಾಮೀಲಾಗಿದ್ದಾರೆ, ಈ ವಿಷಯವನ್ನು ಮಾನ್ಯ ಗೃಹ ಸಚಿವರು ಗಂಭೀರವಾಗಿ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಗೃಹ ಸಚಿವರು) :— ಎಲ್ಲಾ ಜಿಲ್ಲೆಗಳ ವರಿಷ್ಠ ಪೋಲಿಸ್ ಅಧಿಕಾರಿಗಳು ಇತ್ತೀಚೆಗೆ ಕರೆಯಿಸಿ ನಾನು, ಡಿಜಪಿಯವರು ಮಾತನಾಡಿದ್ದೇವೆ. ಮಾನ್ಯ ಶಾಸಕರು ಹೇಳಿರುವಂತೆ, ಅಲ್ಲಿ ಇತ್ತೀಚೆಗೆ ವಿಪರೀತವಾಗಿ ಕಳ್ಳತನ ಇತ್ಯಾದಿಗಳೆಲ್ಲಾ ಹೆಚ್ಚಾಗಿವೆ ಎಂದು ಹೇಳಿರುವುದರಲ್ಲಿ ಸತ್ಯಾಂಶವಿಲ್ಲ. ಅವರು, ಏನು ಘಟನಾವಳಿಗಳು ನಡೆದಿವೆ ಎಂದು ಹೇಳಿದ್ದಾರೆ, ಈ ಬಗ್ಗೆ ನಾನು ಡಿಜಪಿ, ಐಜಪಿಯವರೆಗೆ ಸೂಚನೆಯನ್ನು ಕೊಟ್ಟು, ವಿಚಾರಣೆಯನ್ನು ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ. ಮತ್ತೆ ವರಿಷ್ಠ, ಮೇಲಾಧಿಕಾರಿಗಳು ಕೆಳಹಂತಕ್ಕೆ ಹೋಗಿ ತನಿಖೆ ಮಾಡಬಾರದು, ದಾಳಿ ಮಾಡಬಾರದೆನ್ನುವುದನ್ನು ಹೇಳುವುದು ಸರಿಯಲ್ಲ. ಅವರಿಗೆ ಮಾಹಿತಿ ಇರುತ್ತದೆ ಮಾಡುವುದಕ್ಕೆ ಹಕ್ಕಿರುತ್ತದೆ, ಆ ರೀತಿ ಮಾಡುವುದರಲ್ಲಿ ತಪ್ಪು ಎಂದು ನನಗೇನೂ ಅನ್ನಿಸುವುದಿಲ್ಲ. ಆದರೆ ನಾನು ಒಂದು ಅಂಶವನ್ನು ಹೇಳುವುದಕ್ಕೆ ಬಯಸುವುದೇನೆಂದರೆ, ಸಾರಸಗಟಾಗಿ ಇಡೀ ಜಿಲ್ಲೆಯ ಪೋಲಿಸ್ ಅಧಿಕಾರಿಗಳು ಒಳ್ಳೆಯವರೆಂದು ಹೇಳುವುದಕ್ಕೆ ತಯಾರಿಲ್ಲ, ಆದರಲ್ಲಿ ಒಬ್ಬರೋ, ಇಬ್ಬರೋ ತಪ್ಪು ಮಾಡಿರಬಹುದು, ಮಾನ್ಯ ಶಾಸಕರು ಘಟನಾವಳಿಗಳ ಬಗ್ಗೆ ಹೇಳಿದಂತೆ, ಒಬ್ಬರೊ, ಇಬ್ಬರೊ ಪೋಲಿಸ್ ಅಧಿಕಾರಿಗಳ ಬಗ್ಗೆ ಅವರೇನು ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಕಠಿಣವಾದ ಕ್ರಮವನ್ನು ತುರ್ತಾಗಿ ತೆಗೆದುಕೊಳ್ಳುತ್ತೇನೆ ಎನ್ನುವ ವಿಚಾರವನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಹಾಗೆ ನೋಡಿದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಪೋಲೀಸರು ಒಂದು ದರೋಡೆ ಗುಂಪನ್ನು ಹಿಡಿದಿದ್ದಾರೆ, ಆ ಗುಂಪಿನವರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ, ಅವು ಅತ್ಯಂತ ಸೂಕ್ಷ್ಮವಾಗಿರುವಂತಹ ವಿಚಾರಗಳು. ಆದುದರಿಂದ ಉತ್ತರ ಕನ್ನಡ ಜಿಲ್ಲೆಯ ಪೋಲಿಸರು ಮಾಡಿರುವ ಉತ್ತಮವಾದ ಕೆಲಸಗಳನ್ನೂ ಕೂಡ ನಾನು ಮೆಚ್ಚುತ್ತೇನೆ, ಆದರೆ ಕೆಳಹಂತದಲ್ಲಿ ಒಂದೆರಡು ತಪ್ಪಾಗಿದ್ದರೆ ಅವನ್ನು ಸರಿ ಮಾಡುವ ಭರವಸೆಯನ್ನು ನಾನು ಕೊಡುತ್ತೇನೆ.

ಡಾ : ಎಂ.ಪಿ. ಕರ್ಕಿ :— ಆ ಗುಂಪನ್ನು ಹಿಡಿದಿರುವುದು ನನ್ನ ಕ್ಷೇತ್ರದಲ್ಲಾಗಿರುವಂತಹ ವಿಷಯ. ಈ ಗುಂಪು ಒಮ್ಮೊಮ್ಮೆ ಸಿಕ್ಕಿದಾಗ, ಅವರ ಮೇಲೆ ಶೀಘ್ರ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದರೂ ಕೂಡ, ಅವರನ್ನು ಹಗುರವಾಗಿ ಬಿಟ್ಟಿರುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು.